ಇ) ಮೇಲೆ ನಮೂದಿಸಿದಂತೆ ಇಂತಹ ಯಾವುದೇ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಆದರೂ ಪಹಣಿಗಳಲ್ಲಿ ಯಾವುದಾದರೂ ದೋಷಗಳು ಕಂಡುಬಂದಲ್ಲಿ ಅವುಗಳನ್ನು ಸರಿಪಡಿಸಲು ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು.

ಈ) ನಾಡ ಕಛೇರಿಗಳಲ್ಲಿ ವಿವಿಧ ಸೇವೆಗಳಿಗಾಗಿ ಸರ್ವಜನಿಕರಿಂದ ಹೆಚ್ಚಿನ ಅರ್ಜಿಗಳು ಸ್ವೀಕಾರವಾಗಿ ಜನದಟ್ಟಣೆ ಹೆಚ್ಚಾದಂತಹ ಸಂದರ್ಭಗಳಲ್ಲಿ ಸದರಿ ನಾಡ ಕಛೇರಿಗಳಿಗೆ ಒಂದು ಹೆಚ್ಚುವರಿ ಲಾಗಿನ್ ಐ.ಡಿಗಳನ್ನು ನಿರ್ದೇಶನಾಲಯದಿಂದ ನೀಡಲಾಗುತ್ತಿದೆ. ಹೆಚ್ಚುವರಿ ಕಂಪ್ಯೂಟರ್ ಮತ್ತು ಡಾಟಾ ಎಂಟ್ರಿ ಆಪರೇಟರ್ ಅನ್ನು ಒದಗಿಸಲು ಜಿಲ್ಲಾಧಿಕಾರಿಗಳಿಗೆ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆ.

ಕಬ್ಬು ಸಾಗಾಣೆ ವಾಹನಗಳಿಗೆ ಸೂಕ್ತ ಸ್ಥಳಾವಕಾಶ

216(260); ಚೆಲುವರಾಯಸ್ವಾಮಿ ಎನ್ (ನಾಗ ಮಂಡಲ)

ಅ) ಮಂಡ್ಯದ ಮೈಷುಗರ್ ಕಾರ್ಖಾನೆಯಲ್ಲಿ ಕಬ್ಬು ಅರೆಯುವ ಕಾರ್ಯ ಪ್ರಾರಂಭವಾಗಿದ್ದು, ಕಾರ್ಖಾನೆಗೆ ಕಬ್ಬನ್ನು ತರುವ ಲಾರಿ, ಟ್ರಾಕ್ಟರ್ ಗಾಡಿಗಳನ್ನು ನಿಲ್ಲಿಸಲು ಸೂಕ್ತ ಸ್ಥಳವಿಲ್ಲದೆ ಭಾರಿ ಉದ್ದದ ಸರತಿಯ ಸಾಲು ಅಡ್ಡಾದಿಡ್ಡಿ ರೈತರಿಗೆ, ಜನರಿಗೆ, ವಾಹನ ಸಂಚಾರಕ್ಕೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕಾರ್ಖಾನೆಯ ಕೇನ್‌ಯಾರ್ಡ್ ಸ್ಥಳವನ್ನು ಆಧುನೀಕರಣಗೊಳಿಸಿ, ಪೂರ್ಣವಾಗಿ ಉಪಯೋಗಿಸಿಕೊಂಡು ಗಾಡಿ, ಲಾರಿ ಟ್ರಾಕ್ಟರಗಳಿಗೆ ಪ್ರತ್ಯೇಕ ಲೈನ್ ಮತ್ತು ತೂಕದ ಯಂತ್ರಗಳನ್ನು ವ್ಯವಸ್ಥೆಗೊಳಿಸಲು ಕಬ್ಬು ಸರಬರಾಜಿಗೆ ಬರುವ ವಾಹನಗಳ ಚಾಲಕರು, ರೈತರಿಗೆ ನೀರು, ಶೌಚಾಲಯ ವ್ಯವಸ್ಥೆಗಳನ್ನು ಸಮರ್ಪಕವಾಗಿ ಕಲ್ಪಿಸಲು ಕ್ರಮ ತೆಗೆದುಕೊಳ್ಳುವುದೇ;

ಇ) ಕಾರ್ಖಾನೆಗೆ ವಾಹನಗಳು ಬರುವ ರಸ್ತೆಗಳನ್ನು ಅಗಲೀಕರಣಗೊಳಿಸಿ, ದ್ವಿಪಥ ರಸ್ತೆಗಳನ್ನಾಗಿ ಮಾಡಲು ನಗರಸಭೆಗೆ, ಲೋಕೋಪಯೋಗಿ ಇಲಾಖೆಗೆ, ಜಿಲ್ಲಾ ಪಂಚಾಯತ್/ ತಾಲ್ಲೂಕು ಪಂಚಾಯತ್‌ಗಳಿಗೆ ಮತ್ತು ಪೋಲಿಸ್ ಇಲಾಖೆಗೆ ಕಾರ್ಖಾನೆ ವತಿಯಿಂದ ಮನವೆ ಸಲ್ಲಿಸಲು ಕ್ರಮ ತೆಗೆದುಕೊಳ್ಳಲಾಗುವುದೆ?

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಮಾನ್ಯ ಸಣ್ಣ ಕೈಗಾರಿಕೆ, ಮುಜರಾಯಿ ಮತ್ತು ಸಕ್ಕರೆ ಸಚಿವರು)

ಅ) ಬಂದಿರುವುದಿಲ್ಲ

ಮಂಡ್ಯದ ಮೈಷುಗರ್ ಕಾರ್ಖಾನೆಗೆ ಲಾರಿ, ಟ್ರಾಕ್ಟರ್ ಗಾಡಿಗಳಲ್ಲಿ ಕಬ್ಬು ತರುವ ವಾಹನಗಳನ್ನು ನಿಲ್ಲಿಸಲು ಸೂಕ್ತ ಸ್ಥಳ ಇರುತ್ತದೆ. ಕಬ್ಬಿನ ಅಂಗಳದಲ್ಲಿ 200 ಸಂಖ್ಯೆಯ ಗಾಡಿಗಳನ್ನು ನಿಲ್ಲಿಸಬಹುದಾಗಿದ್ದು, ಹೆಚ್ಚುವರಿ ಗಾಡಿಗಳನ್ನು ಅಂಗಳದ ಪ್ರವೇಶ ದ್ವಾರದ ರಸ್ತೆಯಲ್ಲಿ ನಿಲ್ಲಿಸಲಾಗುತ್ತಿತ್ತು. ಈ ಸಮಯದಲ್ಲಿ ರೈತರಿಗೆ ಮತ್ತು ಜನರಿಗೆ, ವಾಹನ ಸಂಚಾರಕ್ಕೆ ತೊಂದರೆಯಾಗದ ರೀತಿಯಲ್ಲಿ ಪೋಲಿಸ್ ಇಲಾಖೆಯ ಸಹಯೋಗದೊಂದಿಗೆ ಸೂಕ್ತ ವ್ಯವಸ್ಥೆ ಮಾಡಲಾಗುತ್ತಿದೆ. ಸದ್ಯ ಕಬ್ಬಿನ ಅಂಗಳದ ಪಕ್ಕದಲ್ಲಿರುವ ಕಂಪನಿಯ ಜಾಗವನ್ನು ಸ್ವಚ್ಛಗೊಳಿಸಿ ಈ ರೀತಿ ಹೆಚ್ಚುವರಿ ಗಾಡಿಗಳನ್ನು ನಿಲ್ಲಿಸುವ ವ್ಯವಸ್ಥೆ ಮಾಡಲು ಕಂಪನಿಯ ವತಿಯಿಂದ ಕ್ರಮ ಕೈಗೊಳ್ಳಲಾಗಿದೆ.

ಆ) ಕಾರ್ಖಾನೆಯ ಕೇನ್‌ಯಾರ್ಡ್‌ನಲ್ಲಿ ಲಾರಿ, ಟ್ರಾಕ್ಟರ್ ಮತ್ತು ಗಾಡಿಗಳನ್ನು ನಿಲ್ಲಿಸಲು ಪ್ರತ್ಯೇಕ ಲೈನ್ ಮತ್ತು ತೂಕದ ವ್ಯವಸ್ಥೆಯನ್ನು ಕಲ್ಪಿಸಲಾಗಿದ್ದು ಕಬ್ಬು ಸರಬರಾಜಿಗೆ ಬರುವ ವಾಹನಗಳ ಚಾಲಕರು ಮತ್ತು ರೈತರಿಗೆ ಉಪಹಾರ ಮಂದಿರ, ನೀರು, ಶೌಚಾಲಯ ವ್ಯವಸ್ಥೆಗಳನ್ನು ಕಲ್ಪಿಸಲಾಗಿದೆ.

ಇ) ಈಗಾಗಲೇ ಕಾರ್ಖಾನೆಗೆ ವಾಹನಗಳು ಬರುವ ರಸ್ತೆಗಳನ್ನು ಅಗಲೀಕರಣಗೊಳಿಸಿ, ಸುಗಮ ಸಅಂಚಾರಕ್ಕೆ ವ್ಯವಸ್ಥೆ ಮಾಡಿಸಿ

ಕೊಡಲು ಜಿಲ್ಲಾಧಿಕಾರಿಗಳು, ಮಂಡ್ಯರವರಿಗೆ ದಿನಾಂಕ: 11.06.2013 ರಂದು ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಂಡ್ಯರವರಿಗೆ ದಿನಾಂಕ05.07.2012 ರಂದು ಮನವಿಗಳನ್ನು ಸಲ್ಲಿಸಲಾಗಿದೆ.

ಕೆರೆಗಳ ಹೂಳೆತ್ತುವುದು

217 (219); ಶ್ರೀ ದೇವೇಗೌಡ ಜಿ.ಟಿ.

ಅ) ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಸಣ್ಣ ಮತ್ತು ದೊಡ್ಡ ಕೆರೆಗಳ ಸಂಖ್ಯೆ ಎಷ್ಟು; ಯಾವುವು ಮತ್ತು ಎಲ್ಲಿವೆ; (ವಿವರಗಳನ್ನು ನೀಡುವುದು)

ಆ) ಈ ಕೆರೆಗಳಲ್ಲಿ ಹೂಳು ತುಂಬಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಕಳೆದ ಮೂರು ವರ್ಷಗಳಲ್ಲಿ ಈ ಕೆರೆಯಲ್ಲಿರುವ ಹೂಳನ್ನು ತೆಗೆಯಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ಹಾಗೂ ಇದುವರೆಗೂ ವೆಚ್ಚ ಮಾಡಿರುವ ಮೊತ್ತವೆಷ್ಟು; (ವಿವರಗಳನ್ನು ನೀಡುವುದು)

ಈ ಪ್ರಸಕ್ತ ಸಾಲಿನಲ್ಲಿ ಈ ಕೆರೆಗಳ ಅಭಿವೃದ್ಧಿಗಾಗಿ ಸರ್ಕಾರ ಅನುದಾನವನ್ನೇನಾದರೂ ನಿಧಿಪಡಿಸಿ ಬಿಡುಗಡೆ ಮಾಡಲಾಗಿದೆಯೇ;

ಉ) ಹಾಗಿದ್ದಲ್ಲಿ, ಎಷ್ಟು ಪ್ರಮಾಣದ ಅನುದಾನವನ್ನು ನಿಗಧಿಪಡಿಸಿ ಬಿಡುಗಡೆಗೊಳಿಸಲಾಗಿದೆ (ವಿವರಗಳನ್ನು ನೀಡುವುದು)

ಶ್ರೀ ಶಿವರಾಜ್ ಎಸ್. ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು)

ಅ) ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಚಾಮುಂಡೇಶ್ವರಿ ವಿಧಾನ ಸಭಾ ಕ್ಷೇತ್ರದಲ್ಲಿ ಒಟ್ಟು 7 ಸಣ್ಣ ನೀರಾವರಿ ಕೆರೆಗಳಿವೆ.

ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಬಂದಿದೆ

ಇ,ಈ ಮತ್ತು ಉ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.